ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ : ಸಿ5(5)ಬಡ್ತಿ–20/2020–21 ದಿನಾಂಕ : 02–01–2021

ಅಧಿಸೂಚನೆ

ವಿಷಯ :– ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆರಳಚ್ಚುಗಾರರಿಗೆ ಶೀಘ್ರಲಿಪಿಗಾರರ ಹುದ್ದೆಗೆ ಸ್ಥಾನಪನ್ನ ಬಡ್ತಿಯನ್ನು ನೀಡುವ ಬಗ್ಗೆ.

ಉಲ್ಲೇಖ :– ಸರ್ಕಾರದ ಆದೇಶ ಸಂಖ್ಯೆ : ಡಿಪಿಎಆರ್ 12 ಎಸ್‌ಡಿಇ 2005 ದಿ: 29–01–2008.

2:–ದಿನಾಂಕ : 2–1–2021 ರಂದು ನಡೆದ ಇಲಾಖಾ ಮುಂಬಡ್ತಿ ಸಮಿತಿಯ ಸಭಾ ನಡಾವಳಿಗಳು.

* * * * * *

**ಪ್ರಸ್ತಾವನೆ :**

ಸಾರ್ವಜನಿಕ ಶಿಕ್ಷಣ ಇಲಾಖೆಯ ಬೆಂಗಳೂರು ಆಯುಕ್ತಾಲಯದ ಆಡಳಿತ ವ್ಯಾಪ್ತಿಯಲ್ಲಿ ಬರುವ ಶೀಘ್ರಲಿಪಿಗಾರರ ವೃಂದಕ್ಕೆ ಉಲ್ಲೇಖಿತ (1) ರ ಸರ್ಕಾರದ ಆದೇಶದಂತೆ ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೆರಳಚ್ಚುಗಾರರಿಗೆ ಶೀಘ್ರಲಿಪಿಗಾರರ ಹುದ್ದೆಗೆ ಬಡ್ತಿಯನ್ನು ನೀಡುವ ಸಲುವಾಗಿ ದಿನಾಂಕ : 02–01–2021 ರಂದು ನಡೆದ ಇಲಾಖಾ ಮುಂಬಡ್ತಿ ಸಭೆಯಲ್ಲಿ ಅರ್ಹ ಬೆರಳಚ್ಚುಗಾರರಿಗೆ ಶೀಘ್ರಲಿಪಿಗಾರರಾಗಿ ಮುಂಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿಯಲ್ಲಿ ನಿರ್ಣಯಿಸಲಾಯಿತು.

ಸಾರ್ವಜನಿಕ ಶಿಕ್ಷಣ ಇಲಾಖೆಯ ಗ್ರೂಪ್ 'ಸಿ' ವೃಂದದ ವೇತನ ಶ್ರೇಣಿ ರೂ. 21400–42000 ರಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಬೆರಳಚ್ಚುಗಾರರಿಗೆ ಗ್ರೂಪ್ "ಸಿ" ವೃಂದದ ವೇತನ ಶ್ರೇಣಿ ರೂ. 27650–52650 ರಲ್ಲಿ ಶೀಘ್ರಲಿಪಿಗಾರರ ಹುದ್ದೆಗೆ ಇಲಾಖಾ ಮುಂಬಡ್ತಿ ಸಮಿತಿಯ ನಿರ್ಣಯದಂತೆ ಸ್ಥಾನಪನ್ನ ಬಡ್ತಿ ನೀಡಿ. ಆದೇಶಿಸಿದೆ.

ಕರ್ನಾಟಕ ಸಿವಿಲ್ ಸೇವಾ [ಸಾಮಾನ್ಯ ನೌಕರಿ ಭರ್ತಿ] ನಿಯಮಗಳು–1977ರ ನಿಯಮ 4ಎ ರಂತೆ ಬಡ್ತಿ ನೀಡಲಾದ ಈ ಕೆಳಕಂಡ ನೌಕರರು ಅಂಥ ಬಡ್ತಿಯನ್ನು ಹೊಂದಲು ಇಚ್ಛಿಸದಿದ್ದರೆ, ಈ ಆದೇಶ ದಿನಾಂಕದಿಂದ [ಸದರಿ ಆದೇಶದ ಅಧಿಸೂಚನೆಯನ್ನು ಇಲಾಖಾ ವೆಬ್‌ಸೈಟ್ www.schooleducation.kar.in ನಲ್ಲಿ ಪ್ರಕಟಿಸಲಾಗಿದೆ]. 07 ದಿನಗಳ ಒಳಗೆ ನೀಡಲಾದ ಬಡ್ತಿಯನ್ನು ಬಿಟ್ಟುಕೊಡಲು ನೇಮಕ ಪ್ರಾಧಿಕಾರದ ಅನುಮತಿಯನ್ನು ಕೋರಿ ಲಿಖಿತ ಕೋರಿಕೆ ಸಲ್ಲಿಸುವುದು. 07 ದಿನಗಳ ನಂತರ ಯಾವುದೇ ಕೋರಿಕೆಯನ್ನು ಪರಿಗಣಿಸುವುದಿಲ್ಲ.

ಈ ಕೆಳಕಂಡ ಬೆರಳಚ್ಚುಗಾರರಿಗೆ ಬಡ್ತಿ ಆದೇಶ ಹೊರಡಿಸಿದ 07 ದಿನಗಳ ನಂತರ ಅವರುಗಳ ಜೇಷ್ಠತೆ ಅನುಸಾರ ಹಾಗೂ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 18 ಸೇನೌವ 2014 ದಿನಾಂಕ: 06–02–2014 ರ ಅದೇಶದಂತೆ ಅಂಗವಿಕಲ ನೌಕರರಿಗೆ ಆದ್ಯತೆ ನೀಡಿ ಕೌನ್ಸಿಲಿಂಗ್ ಮುಖೇನ ಸ್ಥಳವನ್ನು ಆಯ್ಕೆಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗುವುದು.

ಈ ನೌಕರರುಗಳಿಗೆ ಸ್ಥಳ ನಿಯುಕ್ತಿ ಆದೇಶವನ್ನು ಹೊರಡಿಸಿದ ನಂತರ ಮುಂಬಡ್ತಿ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಆರ್ಥಿಕ ಸೌಲಭ್ಯಕ್ಕೆ ಅರ್ಹರಾಗುತ್ತಾರೆ.

| ಕ್ರಮ ಸಂಖ್ಯೆ | ಜೇಷ್ಠತಾ ಸಂಖ್ಯೆ | ಬೆರಳಚ್ಚುಗಾರರ ಹೆಸರು ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಕಛೇರಿಯ ಹೆಸರು ಮತ್ತು ವಿಳಾಸ<br>ಶ್ರೀಮತಿ / ಶ್ರೀ |
|---|---|---|
| 1 | 180 | ಮಮತಾ ಬಿ.ಪಿ<br>ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು |
| 2 | 183 | ಹನುಮಂತಪ್ಪ ಬಾಳಪ್ಪ ಹಿರೇಗೊಂಡ, ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ. |

ಸ್ಥಾನಪನ್ನ ಬಡ್ತಿ ಹೊಂದಿದ ನೌಕರರುಗಳಿಗೆ ದಿನಾಂಕ: 12-01-2021 ರಂದು ಬೆಳಿಗ್ಗೆ 11 ಗಂಟೆಗೆ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇಲ್ಲಿ ಸ್ಥಳ ನಿಯುಕ್ತಿ ಕೌನ್ಸಿಲಿಂಗ್ ನಡೆಸಲಾಗುವುದು. ನೌಕರರು ನಿಗಧಿತ ದಿನಾಂಕದಂದು ಕೌನ್ಸಿಲಿಂಗ್‌ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳಲು ಸೂಚಿಸಿದೆ.

(ವಿ. ಅನ್ಬುಕುಮಾರ್)
ಆಯುಕ್ತರು
2/1/21

ಇವರಿಗೆ:

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ.
3. ಮಾನ್ಯ ಆಯುಕ್ತರ ಆಪ್ತ ಕಾರ್ಯದರ್ಶಿಗಳಿಗೆ
4. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ರವರಿಗೆ ಈ ಅಧಿಸೂಚನೆಯನ್ನು ಇಲಾಖಾ ವೆಬ್ ಸೈಟ್- www.schooleducation.kar.in "ನಲ್ಲಿ ಪ್ರಕಟಿಸಲು ತಿಳಿಸಿದೆ.
5. ಸಂಬಂಧಿಸಿದ ನೌಕರರುಗಳಿಗೆ.
6. ಕಛೇರಿ ಪ್ರತಿ.